**ಅಸಲು ದಾವಾ ನಂಃ117/2021**
**ಪಿ.ಡಬ್ಲ್ಯೂ-01**

**ದಿನಾಂಕಃ 30.09.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., 4 ರಿಂದ 7, 9 ಮತ್ತು 10 ನೇ ಪ್ರತಿವಾದಿ ಪರ ವಕೀಲರಿಂದ**

4. 4 ನೇ ಪ್ರತಿವಾದಿ ಫಾತಿಮಾ ನನ್ನ ಚಿಕ್ಕಪ್ಪನ ಮಗಳು ಎಂದರೆ ಸರಿ. 4 ನೇ ಪ್ರತಿವಾದಿ ಫಾತಿಮಾ ಇವರ ಗಂಡನ ಹೆಸರು ಇಮಾಮ್ ಸಾಬ್ ಎಂದರೆ ಸರಿ. 5 ನೇ ಪ್ರತಿವಾದಿ ಜೈನಾಬೀ ನನ್ನ ಚಿಕ್ಕಪ್ಪನ ಮಗಳು ಎಂದರೆ ಸರಿ. 5 ನೇ ಪ್ರತಿವಾದಿ ಜೈನಾಬೀ ಇವರ ಗಂಡನ ಹೆಸರು ಅಸನ್ ಸಾಬ್ ಎಂದರೆ ಸರಿ. ನಾನು 4 ಮತ್ತು 5 ನೇ ಪ್ರತಿವಾದಿಯವರ ಗಂಡಂದಿರ ಹೆಸರುಗಳನ್ನು ಉದ್ದೇಶ ಪೂರ್ವಕವಾಗಿ ಖಾಸೀಂ ಸಾಬ್ ಹಾಗೂ ಎಲೆ ಇಮಾಮ್ ಸಾಬ್ ಎಂದು ತಪ್ಪಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ.

5. ನನ್ನ ಅಣ್ಣ 1 ನೇ ವಾದಿ ಮೊಹಮದ್ ಸಾಬ್ ಹಿರಿಯೂರು ತಾಲ್ಲೂಕಿನ ಅಂಬಲಗೆರೆ ಗ್ರಾಮದಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ನನ್ನ 2 ನೇ ಅಣ್ಣ 2 ನೇ ಪ್ರತಿವಾದಿ ಹಯತ್ ಸಾಬ್ ದಾವಣಗೆರೆಯ ಶಿವನಗರದಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ನಾನು ದಾವಣಗೆರೆಯ ಮೊಹಬೂಬ್ ನಗರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ಚಿಕ್ಕಪ್ಪನ ಮಗನಾದ 4 ನೇ ವಾದಿ ಅಲ್ಲಿಪೀರ್ ಸಾಬ್ ಹಿರಿಯೂರು ತಾಲ್ಲೂಕಿನ ವೇದಾವತಿ ನಗರದಲ್ಲಿ ವಾಸವಾಗಿದ್ದಾನೆ ಎಂದರೆ ಸರಿ. ನನ್ನ ಚಿಕ್ಕಪ್ಪನ ಇನ್ನೊಬ್ಬ ಮಗನಾದ 5 ನೇ ವಾದಿ ಮೊಹಮದ್ ಬಾಬುಮೀಯಾ ಹೈದ್ರಾಬಾದ್ ಪಟ್ಟಣದ ಸಾಸೂರ್ ನಗರದಲ್ಲಿ ವಾಸವಾಗಿದ್ದಾನೆ ಎಂದರೆ ಸರಿ.

6. ನನ್ನ ತಂದೆ ಗರೀಬ್ ಸಾಬ್ ತೀರಿಕೊಂಡು ಸುಮಾರು 20 ವರ್ಷಕ್ಕಿಂತ ಜಾಸ್ತಿಯಾಗಿರುತ್ತದೆ. ನನ್ನ ಚಿಕ್ಕಪ್ಪ ಹುಸೇನ್ ಸಾಬ್ ತೀರಿಕೊಂಡು ಸುಮಾರು 15-16 ವರ್ಷಗಳಾಗಿರುತ್ತದೆ. ನನ್ನ ತಂದೆ ಗರೀಬ್ ಸಾಬ್ ತೀರಿಕೊಂಡ ನಂತರ ಅವರ ಮೂರು ಜನ ಮಕ್ಕಳಾದ ನಾವುಗಳು ವಾದ ಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಮೂರು ಜನ ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಅವರವರ ವ್ಯವಹಾರವನ್ನು ಅವರೇ ನೋಡಿಕೊಂಡು ಹೋಗುತ್ತಿದ್ದೇವೆ ಎಂದರೆ ಸರಿ. ನನ್ನ ಚಿಕ್ಕಪ್ಪನ ಮಕ್ಕಳಾದ ಅಲ್ಲಿಪೀರ್ ಸಾಬ್ ಮತ್ತು ಮೊಹಮದ್ ಬಾಬುಮೀಯಾ ವಾದ ಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ ಪ್ರತ್ಯೇಕವಾಗಿ ಇದ್ದುಕೊಂಡು ಅವರವರ ವ್ಯವಹಾರವನ್ನು ಅವರೇ ನೋಡಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ.

7. ನನ್ನ ತಾತ ಸಣ್ಣ ಬುಡೇನ್ ಸಾಬ್ ಹಾಗೂ ಹಸನ್ ಸಾಬ್ ಇಬ್ಬರು ಸಹೋದರರು ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಗೆ ಒಟ್ಟು 5 ಜನ ಮಕ್ಕಳು ಎಂದರೆ ಸರಿ. ಅವರುಗಳೆಂದರೆ 1) ಗರೀಬ್ ಸಾಬ್, 2) ಖಾಸಿಂ ಸಾಬ್, 3) ಹುಸೇನ್ ಸಾಬ್, 4) ಹೊನ್ನೂರ್ ಬೀ ಮತ್ತು 5) ಹುಸೇನ್ ಬೀ ಎಂದರೆ ಸರಿ. ಹೊನ್ನೂರ್ ಬೀ ಮತ್ತು ಹುಸೇನ್ ಬೀ ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಹೊನ್ನೂರ್ ಬೀ ಮತ್ತು ಹುಸೇನ್ ಬೀ ಇವರ ಮಕ್ಕಳು ಜೀವಂತ ಇರುತ್ತಾರೆ ಎಂದರೆ ಸರಿ.

8. ನನ್ನ ತಾತ ಸಣ್ಣ ಬುಡೇನ್ ಸಾಬ್ ಬಾಲೇನಹಳ್ಳಿ ಖಾಯಂ ನಿವಾಸಿ ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರಿಗೆ ಕುರುಡಿಹಳ್ಳಿ ಗ್ರಾಮದ ಸರ್ವೆ ನಂಬರ್ 55/2 ನೇದ್ದರಲ್ಲಿ 8 ಎಕರೆ 10 ಗುಂಟೆ ಜಮೀನು ಇತ್ತು ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಮತ್ತು ಅವರ ಸಹೋದರ ಹಸನ್ ಸಾಬ್ ಇವರು ಜೀವಿತಾವಧಿಯಲ್ಲಿ 8 ಎಕರೆ 10 ಗುಂಟೆ ಜಮೀನಿನಲ್ಲಿ ಮೌಖಿಕವಾಗಿ ತಲಾ 4 ಎಕರೆ 5 ಗುಂಟೆಯಂತೆ ಪಾಲುವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಮೌಖಿಕವಾಗಿ ಪಾಲುವಿಭಾಗ ಮಾಡಿಕೊಂಡಂತೆ ನನ್ನ ತಾತ ಸಣ್ಣ ಬುಡೇನ್ ಸಾಬ್ ಮತ್ತು ಅವರ ಸಹೋದರ ಹಸನ್ ಸಾಬ್ ಇಬ್ಬರು ತಲಾ 4 ಎಕರೆ 5 ಗುಂಟೆಯಂತೆ ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರ ಸಹೋದರ ಹಸನ್ ಸಾಬ್ ತೀರಿಕೊಂಡ ನಂತರ 4 ಎಕರೆ 5 ಗುಂಟೆ ಜಮೀನಿನ ಖಾತೆಯೂ ಅವರ ಒಬ್ಬನೇ ಮಗನಾದ ಖಾಸಿಂ ಸಾಬ್ ಇವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ.

9. ನನ್ನ ತಾತ ಸಣ್ಣ ಬುಡೇನ್ ಸಾಬ್ ರವರ ಹೆಸರಿಗೆ 4 ಎಕರೆ 5 ಗುಂಟೆ ಜಮೀನು ಪ್ರತ್ಯೇಕವಾಗಿ ಖಾತೆ ಬಂದಿರುತ್ತದೆ ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರಿಗೆ ಬಾಲೇನಹಳ್ಳಿ ಗ್ರಾಮದಲ್ಲಿ ಒಂದು ವಾಸದ ಮನೆ ಇತ್ತು ಎಂದರೆ ಸರಿ. ಈಗ ನೋಡುತ್ತಿರುವ ಛಾಯ ಚಿತ್ರಗಳು ಬಾಲೇನಹಳ್ಳಿ ಗ್ರಾಮದಲ್ಲಿರುವ ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರ ಮನೆ ಎಂದರೆ ಸರಿ. ಸಾಕ್ಷಿಯು ಎರಡು ಛಾಯ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿ.ಡಿ.1 ಮತ್ತು 2 ಅಂತ ಗುರುತಿಸಲಾಯಿತು. ನಿ.ಡಿ.1 ಮತ್ತು 2 ರ ಮನೆಯನ್ನು ನನ್ನ ತಾತ ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರ ಮೂರು ಜನ ಮಕ್ಕಳಾದ 1) ಗರೀಬ್ ಸಾಬ್, 2) ಖಾಸಿಂ ಸಾಬ್ ಮತ್ತು 3) ಹುಸೇನ್ ಸಾಬ್ ಮೌಖಿಕವಾಗಿ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಗರೀಬ್ ಸಾಬ್ ಇವರ ಭಾಗಕ್ಕೆ ಬಂದಂತಹ ಮನೆಯನ್ನು ನನ್ನ ತಂದೆ ಜೀವಿತಾವಧಿಯಲ್ಲಿ ತನ್ನ ಸಹೋದರ ಖಾಸಿಂ ಸಾಬ್ ಇವರಿಗೆ ಮಾರಾಟ ಮಾಡಿ ಹೋಗಿರುತ್ತಾರೆ

ಎಂದರೆ ಸರಿಯಲ್ಲ. ನನ್ನ ತಂದೆ ಗರೀಬ್ ಸಾಬ್ ಇವರಿಗೆ ಮನೆಯಲ್ಲಿ ಪೂರ್ವ-ಪಶ್ಚಿಮ 3 ಗಜ, ಉತ್ತರ-ದಕ್ಷಿಣ 6 ಗಜ, ಮುಂಭಾಗದ 3 ಗಜ ಒಟ್ಟು 9 ಗಜ ಭಾಗಕ್ಕೆ ಬಂದಿತ್ತು ಎಂದರೆ ಸರಿ.

10. ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆಯ ಪೂರ್ವ ದಿಕ್ಕಿಗೆ ಅವರ ಸಹೋದರ ಖಾಸಿಂ ಸಾಬ್‌ರವರ ಭಾಗದ ಮನೆ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆಯ ಪಶ್ಚಿಮ ದಿಕ್ಕಿಗೆ ಮಡಿವಾಳರ ಸತ್ಯಪ್ಪನವರ ಮನೆ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆಯ ಉತ್ತರ ದಿಕ್ಕಿಗೆ ನನ್ನ ತಂದೆಯ ಸಹೋದರ ಹುಸೇನ್ ಸಾಬ್ ಇವರ ಭಾಗದ ಮನೆ ಬರುತ್ತದೆ ಎಂದರೆ ಸರಿ. ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆಯ ದಕ್ಷಿಣ ದಿಕ್ಕಿಗೆ ದಾರಿ ಇರುತ್ತದೆ ಎಂದರೆ ಸರಿ. ನನ್ನ ತಂದೆಯ ಭಾಗದ ಮನೆಯ ಮುಂಬಾಗಿಲು ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿ.

11. ನನಗೆ ಈಗ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ತಂದೆ ಗರೀಬ್ ಸಾಬ್ ಇವರ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಮೊದಲು ಹೌದು ಎಂದು ನುಡಿದು ನಂತರ ನನ್ನ ತಂದೆ ಹೆಬ್ಬೆಟ್ಟು ಹಾಕುತ್ತಾರೆ ಎಂದು ನುಡಿಯುತ್ತಾರೆ. ಬಾಲೇನಹಳ್ಳಿ ಗ್ರಾಮದಲ್ಲಿ ತಿಮ್ಮಪ್ಪಶೆಟ್ಟಿ, ಹುಸೇನ್ ಸಾಬಿ, ಟೈಲರ್ ಬುಡೇನ್ ಸಾಬಿ, ಎಂ.ಜಿ. ಬುಡೇನ್ ಸಾಬಿ ಮತ್ತು ಬಿ. ಹುಸೇನ್ ಸಾಬಿ ಎಂಬವರು ಇದ್ದಾರೆ ಎಂದರೆ ಸರಿ. ಹಾಲಿ ಮೇಲಿನ ಎಲ್ಲರೂ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸಣ್ಣ ಬುಡೇನ್ ಸಾಬ್ ಇವರ ಮಗ ಗರೀಬ್ ಸಾಬ್ ಎಂದರೆ ನನ್ನ ತಂದೆ ಎಂದರೆ ಸರಿ. ಸಣ್ಣ ಬುಡೇನ್ ಸಾಬ್ ಇವರ ಮಗ ಖಾಸಿಂ ಸಾಬ್ ಎಂದರೆ ನನ್ನ ತಂದೆಯ ತಮ್ಮ ಎಂದರೆ ಸರಿ. ನನ್ನ ತಾತ ಸಣ್ಣ ಬುಡೇನ್ ಸಾಬ್ ಇವರನ್ನು ಮೊಹಮದ್ ಸಣ್ಣ ಬುಡೇನ್ ಸಾಬ್ ಎಂದು ಸಹ ಕರೆಯುತ್ತಾರೆ ಎಂದರೆ ಸರಿಯಲ್ಲ. ಬಾಲೇನಹಳ್ಳಿ ವಾಸಿ ಮೊಹಮದ್ ಸಣ್ಣ ಬುಡೇನ್ ಸಾಬ್ ಎಂದರೆ ನನ್ನ ತಾತ ಎಂದರೆ ಸರಿ. ಸಣ್ಣ ಬುಡೇನ್ ಸಾಬ್ ಇವರ ಮಗ ಹುಸೇನ್ ಸಾಬ್ ನನ್ನ ತಂದೆಯ ಕೊನೆಯ ತಮ್ಮ ಎಂದರೆ ಸರಿ.

12. ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಟೈಲರಿಂಗ್ ಕೆಲಸ ಮಾಡುಕೊಂಡಿರುತ್ತೇನೆ. ನನ್ನ ತಂದೆ ಬಾಲೇನಹಳ್ಳಿ ಗ್ರಾಮದಲ್ಲಿರುವ ಮನೆಯಲ್ಲಿ ತಮಗೆ ಬಂದಂತಹ ಭಾಗದ ಮನೆಯನ್ನು ತನ್ನ ಸಹೋದರ ಖಾಸಿಂ ಸಾಬ್ ಇವರಿಗೆ ಮಾರಾಟ ಮಾಡಿ ಹಿರಿಯೂರು ತಾಲ್ಲೂಕಿನ ಪಿಟ್ಲಾಲಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಮಾರಾಟ ಮಾಡಿಲ್ಲ, ಆದರೆ ಪಿಟ್ಲಾಲಿ ಗ್ರಾಮದಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಬಾಲೇನಹಳ್ಳಿ ಗ್ರಾಮದಲ್ಲಿ ಇದ್ದಂತಹ ಮನೆಯನ್ನು ಹೊರತುಪಡಿಸಿ ಪಿಟ್ಲಾಲಿ ಗ್ರಾಮದಲ್ಲಿ ವಾಸದ

ಮನೆ ಇತ್ತು ಎಂದರೆ ಸಾಕ್ಷಿಯು ಬಾಡಿಗೆ ಮನೆಯಲ್ಲಿ ಇದ್ದೇವು, ಬರಗಾಲ ಇದುದ್ದಕ್ಕೆ ಅಲ್ಲಿ ಹೋಗಿದ್ದೇವು ಎಂದು ನುಡಿಯುತ್ತಾರೆ. ನನ್ನ ತಂದೆ ಭಾಗಕ್ಕೆ ಬಂದಂತಹ 9 ಗಜ ಮನೆಯು ವಾಸ ಮಾಡಲು ಯೋಗ್ಯ ಇಲ್ಲದಿರುವ ಕಾರಣಕ್ಕೆ ನನ್ನ ತಂದೆ ಜೀವಿತಾವಧಿಯಲ್ಲಿ ತನ್ನ ಸಹೋದರನಿಗೆ ಮಾರಾಟ ಮಾಡಿ ಪಿಟ್ಲಾಲಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ.

13. ನನ್ನ ತಂದೆ ಗರೀಬ್ ಸಾಬ್ ಇವರಿಗೆ ಮನೆಯಲ್ಲಿ ಬಂದಂತಹ ಭಾಗವಾದ ಪೂರ್ವ-ಪಶ್ಚಿಮ 3 ಗಜ, ಉತ್ತರ-ದಕ್ಷಿಣ 6 ಗಜ, ಮುಂಭಾಗದ 3 ಗಜ ಒಟ್ಟು 9 ಗಜ ಅಳತೆಯ ಮನೆಯನ್ನು ದಿನಾಂಕ.02.06.1982 ರಂದು ತನ್ನ ಸಹೋದರ ಖಾಸಿಂ ಸಾಬ್ ಇವರಿಗೆ 600/- ರೂಪಾಯಿಗಳಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ.

14. ಖಾಸಿಂ ಸಾಬ್ ಇವರ ಮಕ್ಕಳಾದ 6 ಮತ್ತು 10 ನೇ ಪ್ರತಿವಾದಿಯವರು ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆ ಮತ್ತು ಅವರ ತಂದೆಯ ಭಾಗಕ್ಕೆ ಬಂದಂತಹ ಮನೆಯನ್ನು ರಿಪೇರಿ ಮಾಡಿಸಿಕೊಂಡು ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ನಮಗೆ ಗೊತ್ತಾಗದಂತೆ ಮಾಡಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಮನೆಯ ರಿಪೇರಿಯನ್ನು ಮಾಡಿಸುವಾಗ ತಕರಾರು ಮಾಡಿರುತ್ತೀನಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ಗೊತ್ತಾದ ಮೇಲಾದರೂ ಸಹ ತಕರಾರು ಮಾಡಿರುತ್ತೀನಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ತಕರಾರು ಮಾಡಿ ನಿಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ರಿಪೇರಿ ಮಾಡಿಸಿರುವಂತಹ ನಿ.ಡಿ.2 ರಲ್ಲಿ ಕಾಣಿಸುವ ಮನೆಯನ್ನು ಮಡಿವಾಳರ ತಿಪ್ಪೇಸ್ವಾಮಿ ಎಂಬುವರಿಗೆ 6 ಮತ್ತು 10 ನೇ ಪ್ರತಿವಾದಿಯವರು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಬಾಡಿಗೆ ಹಣವನ್ನು 6 ಮತ್ತು 10 ನೇ ಪ್ರತಿವಾದಿಯವರು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿ.

15. ನನ್ನ ತಂದೆಯ ಭಾಗಕ್ಕೆ ಬಂದಂತಹ ಮನೆಯನ್ನು ತನ್ನ ಸಹೋದರನಿಗೆ ದಿನಾಂಕ.02.06.1982 ರಂದು 600/- ರೂಪಾಯಿಗಳಿಗೆ ಮಾರಾಟ ಮಾಡಿ ಸ್ವಾಧೀನವನ್ನು ಬಿಟ್ಟು ಕೊಟ್ಟಿದ್ದರು ಸಹ ಮಾರಾಟ ಮಾಡಿರುವುದಿಲ್ಲ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ತಿಮ್ಮಪ್ಪಶೆಟ್ಟಿ, ಹುಸೇನ್ ಸಾಬಿ, ಟೈಲರ್ ಬುಡೇನ್ ಸಾಬಿ, ಎಂ.ಜಿ. ಬುಡೇನ್ ಸಾಬಿ ಮತ್ತು ಬಿ. ಹುಸೇನ್ ಸಾಬಿ ಎಂಬುವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಭಾಗವನ್ನು ಮಾರಾಟ ಮಾಡಿರುವ ವಿಚಾರ ನಮಗೆ ಗೊತ್ತಿದ್ದರು ಕೂಡ ಮಾರಾಟ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. 1982 ನೇ ಇಸವಿಯಿಂದ ಬಾಲೇನಹಳ್ಳಿ ಗ್ರಾಮದಲ್ಲಿ ನಾನು ವಾಸ ಇಲ್ಲ ಎಂದರೆ ಸಾಕ್ಷಿಯು ಹೋಗುವುದು ಬರುವುದು ಮಾಡುತ್ತೇನೆ ಎಂದು ನುಡಿಯುತ್ತಾರೆ. 1982 ನೇ ಇಸವಿಯಿಂದ ಬಾಲೇನಹಳ್ಳಿ ಗ್ರಾಮದ ವಿಳಾಸದಲ್ಲಿ ನನ್ನ ತಂದೆ ಮತ್ತು ಅವರ ಮಕ್ಕಳ ಪಡಿತರ ಚೀಟಿ ಹಾಗೂ ಚುನವಣಾ ಗುರುತಿನ ಚೀಟಿ ಇರುವುದಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ತಂದೆ ಎಂದಿಗೂ ಕೂಡ ಬಾಲೇನಹಳ್ಳಿ ಗ್ರಾಮದಲ್ಲಿ ಇಲ್ಲದಿರುವ ಕಾರಣಕ್ಕೆ ನಮಗೆ ಪಡಿತರ ಚೀಟಿ ಹಾಗೂ ಚುನವಣಾ ಗುರುತಿನ ಚೀಟಿ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಗರೀಬ್ ಸಾಬ್ ಇವರು ದಿನಾಂಕ.02.06.1982 ರ ಕ್ರಯ ಪತ್ರಕ್ಕೆ ಸಹಿ ಮಾಡಿದ್ದರು ಕೂಡ ಸಹಿ ಮಾಡಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಹೆಬ್ಬೆಟ್ಟು ಹಾಕುತ್ತಾರೆ ಎಂದು ನುಡಿಯುತ್ತಾರೆ. ಆಗಾದರೆ ನನ್ನ ತಂದೆ ಎಲ್ಲ ದಾಖಲೆಗಳಿಗೂ ಕೇವಲ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಿದ್ದರಾ ಎಂದರೆ ಸಾಕ್ಷಿಯು ಕೆಲವೊಂದು ಸಮಯದಲ್ಲಿ ಸಹಿ ಮಾಡುತ್ತಿದ್ದರು ಹಾಗೂ ಕೆಲವೊಂದು ಸಮಯದಲ್ಲಿ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಹೆಬ್ಬೆಟ್ಟಿನ ಗುರುತು ಹಾಕಿರುವ ದಾಖಲೆಗಳು ನನ್ನ ಬಳಿ ಇರುತ್ತವೆ. ಅವುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**(4 ರಿಂದ 7, 9 ಮತ್ತು 10 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.